# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು ರವರ ಕಛೇರಿ, ಎನ್.ಆರ್ ಚೌಕ, ಬಿಬಿಎಂಪಿ, ಕೇಂದ್ರ ಕಛೇರಿ,
ಬೆಂಗಳೂರು–560002.

ಫೋನ್ ನಂ.080–2223 7455/2222 1286, ಇ–ಮೇಲ್:comm@bbmp.gov.in

ಸಂಖ್ಯೆ:ಮು.ಆ/ಬೃಬೆಂಮಪಾ/ಪಿಆರ್/ಆಎ2054/2024–25 ದಿನಾಂಕ: 5.11.24

**ಸುತ್ತೋಲೆ**

ವಿಷಯ:– ಪಾಲಿಕೆಯಿಂದ ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ನಿರ್ಮಿಸುವ ಕಟ್ಟಡಗಳು ಮತ್ತು ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತಡೆಯುವ ಕುರಿತು.

ಉಲ್ಲೇಖ:– 1. ಪಾಲಿಕೆಯ ಕಛೇರಿ ಆದೇಶ ಸಂಖ್ಯೆ:ಮು.ಆ/ಪಿ.ಆರ್/(ಜಿ)2072/2024–25, ದಿನಾಂಕ:18–10–2024.
2. ಪಾಲಿಕೆಯ ಕಛೇರಿ ಆದೇಶ ಸಂಖ್ಯೆ:ಮು.ಆ/ಪಿ.ಆರ್/191/2024–25, ದಿನಾಂಕ:18–10–2024.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ ಪಡೆಯದೇ/ ಮಂಜೂರಾತಿ ನಕ್ಷೆ ಉಲ್ಲಂಘಿಸಿ ನಿರ್ಮಿಸುತ್ತಿರುವ ಕಟ್ಟಡಗಳನ್ನು ತೆರವುಗೊಳಿಸಲು ಉಲ್ಲೇಖ (1) ರ ಕಛೇರಿ ಆದೇಶದಲ್ಲಿ ವಲಯ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ. ಈ ಸಂಬಂಧ ಉಲ್ಲೇಖ (2) ರ ಕಛೇರಿ ಆದೇಶದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ/ ಮಂಜೂರಾತಿ ನಕ್ಷೆ ಉಲ್ಲಂಘಿಸಿ ನಿರ್ಮಿಸುತ್ತಿರುವ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಮುಂದುವರೆದು, ಸದರಿ ಅನಧಿಕೃತ ಕಟ್ಟಡ ನಿರ್ಮಾಣ/ ಮಂಜೂರಾತಿ ನಕ್ಷೆ ಉಲ್ಲಂಘಿಸಿ ನಿರ್ಮಿಸುತ್ತಿರುವ ಕಟ್ಟಡದ ಭಾಗಗಳನ್ನು ಬಿಬಿಎಂಪಿ ಕಾಯ್ದೆ 2020 ರ ಅವಕಾಶಗಳಂತೆ ಪಾಲಿಕೆಯ ಎಲ್ಲಾ ವಲಯ ಕಛೇರಿಗಳಲ್ಲಿ ಏಕರೂಪದ ಕಾರ್ಯವಿಧಾನವನ್ನು ಅಳವಡಿಸಿಕೊಂಡು ನಿಯಮಾನುಸಾರ ಕ್ರಮ ಜರುಗಿಸಲು ಪೂರಕವಾಗಿ ಬಿಬಿಎಂಪಿ ಕಾಯ್ದೆ 2020 ರ ಕಲಂ 248(1), 248(2) ಮತ್ತು 248(3) ರಲ್ಲಿ ಅನಧಿಕೃತ ನಿರ್ಮಾಣದಾರರಿಗೆ ಜಾರಿಗೊಳಿಸಬೇಕಾದ ಆದೇಶ/ನೋಟೀಸ್‌ನ ಮಾದರಿ ನಮೂನೆಯನ್ನು ಇದರೊಂದಿಗೆ ಅಡಕ ಮಾಡುತ್ತಾ, ಅನಧಿಕೃತ ನಿರ್ಮಾಣಗಳ ವಿರುದ್ಧ ನಿಯಮಾನುಸಾರ ಕ್ರಮಜರುಗಿಸಲು ಸೂಚಿಸಿದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ವಿಶೇಷ ಆಯುಕ್ತರು (ಯೋಜನೆ)/(ಆಡಳಿತ)/(ಕಂದಾಯ) ರವರ ಮಾಹಿತಿಗಾಗಿ ಸಲ್ಲಿಸಿದೆ.
3) ವಲಯಗಳ ಆಯುಕ್ತರು ಮತ್ತು ಜಂಟಿ ಆಯುಕ್ತರು (ಪೂರ್ವ ವಲಯ/ ಪಶ್ಚಿಮ ವಲಯ /ದಕ್ಷಿಣ ವಲಯ /ಮಹದೇವಪುರ ವಲಯ/ ಯಲಹಂಕ ವಲಯ /ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ /ಬೊಮ್ಮನಹಳ್ಳಿ ವಲಯ) ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಪ್ರಧಾನ ಅಭಿಯಂತರರು, ಬಿಬಿಎಂಪಿ ರವರ ಮಾಹಿತಿಗಾಗಿ.
5) ಮುಖ್ಯ ನಗರ ಯೋಜಕರು, ಬಿಬಿಎಂಪಿ ರವರ ಮಾಹಿತಿಗಾಗಿ.
6) ಉಪ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ.
7) ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
8) ಮುಖ್ಯ ಅಭಿಯಂತರರು (ಪೂರ್ವ ವಲಯ/ ಪಶ್ಚಿಮ ವಲಯ /ದಕ್ಷಿಣ ವಲಯ /ಮಹದೇವಪುರ ವಲಯ/ ಯಲಹಂಕ ವಲಯ /ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ /ಬೊಮ್ಮನಹಳ್ಳಿ ವಲಯ) ರವರುಗಳ ಸೂಕ್ತ ಕ್ರಮಕ್ಕಾಗಿ.
9) ಜಂಟಿ ನಿರ್ದೇಶಕರು (ನಗರ ಯೋಜನೆ–ಕೇಂದ್ರ ಕಚೇರಿ ಉತ್ತರ ಮತ್ತು ದಕ್ಷಿಣ) (ಪೂರ್ವ ವಲಯ/ ಪಶ್ಚಿಮ ವಲಯ /ದಕ್ಷಿಣ ವಲಯ /ಮಹದೇವಪುರ ವಲಯ /ಯಲಹಂಕ ವಲಯ /ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ /ಬೊಮ್ಮನಹಳ್ಳಿ ವಲಯ) ರವರುಗಳ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
10) ಎಲ್ಲಾ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ.
11) ಸಹಾಯಕ ನಿರ್ದೇಶಕರು (ನಗರ ಯೋಜನೆ) (ಪೂರ್ವ ವಲಯ/ಪಶ್ಚಿಮ ವಲಯ /ದಕ್ಷಿಣ ವಲಯ/ಮಹದೇವಪುರ ವಲಯ /ಯಲಹಂಕ ವಲಯ/ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ/ ಬೊಮ್ಮನಹಳ್ಳಿ ವಲಯ) ರವರುಗಳ ಸೂಕ್ತ ಕ್ರಮಕ್ಕಾಗಿ.
12) ಎಲ್ಲಾ ಉಪ–ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ ಸಂಬಂಧಪಟ್ಟ ವಾರ್ಡ್‌ನ ಅಭಿಯಂತರರು ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಅಗತ್ಯ ನಿರ್ದೇಶನ ನೀಡುವಂತೆ ಸೂಚಿಸಿದೆ.
13) ಕಛೇರಿ ಪ್ರತಿ.

HEAD OF THE LEGAL CELL
Bruhat Bengaluru Mahanagara Palike
No.
Date

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರವರ ಕಛೇರಿ
ಟಪಾಲು ಶಾಖೆ
06 NOV 2024
ಸ್ವೀಕರಿಸಿದೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ಆಯುಕ್ತರು ರವರ ಕಛೇರಿ,________ ವಲಯ, ಬಿಬಿಎಂಪಿ, ಬೆಂಗಳೂರು

**ಬಿಬಿಎಂಪಿ ಕಾಯ್ದೆ 2020 ರ ಕಲಂ 248 (1) ಪ್ರಕಾರ ಹೊರಡಿಸಿರುವ ತಾತ್ಕಾಲಿಕ ಆದೇಶ**

ಶ್ರೀ/ಶ್ರೀಮತಿ/ಮೆ॥. ________________ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ________ ವಲಯದ ವಾರ್ಡ್ ಸಂಖ್ಯೆ:__________, ಸ್ವತ್ತಿನ ಸಂಖ್ಯೆ: __________, ರಲ್ಲಿ (ಷೆಡ್ಯೂಲ್ ಆಸ್ತಿಯಲ್ಲಿ) ಅನಧಿಕೃತವಾಗಿ/ಮಂಜೂರಾತಿ ನಕ್ಷೆ ಉಲ್ಲಂಘನೆ ಮಾಡಿ ನಿರ್ಮಿಸುತ್ತಿರುವ ಕಟ್ಟಡ ನಿರ್ಮಾಣದ ವರದಿಯು __________ ರವರಿಂದ ದಿನಾಂಕ: __________ ರಂದು ನನಗೆ ಸ್ವೀಕೃತವಾಗಿರುತ್ತದೆ. ನಿಯುಕ್ತಿಗೊಳಿಸಲಾದ ಪಾಲಿಕೆ ಅಧಿಕಾರಿಗಳು ನಿಯಮಾನುಸಾರ ನಡೆಸಿದ ಸ್ಥಳ ಪರಿಶೀಲನಾ ವರದಿ ಹಾಗೂ ಮಹಜರ್ ಪ್ರಕಾರ ನಿರ್ಮಿಸುತ್ತಿರುವ/ನಿರ್ಮಿಸಿರುವ ಕಟ್ಟಡವು ಅನಧಿಕೃತವಾಗಿ/ಮಂಜೂರಾದ ನಕ್ಷೆ, ವಲಯ ನಿಯಮಾವಳಿ ಮತ್ತು ಕಟ್ಟಡ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಾಣವಾಗಿದ್ದು ಬಿಬಿಎಂಪಿ ಕಾಯ್ದೆ 2020ರ ಕಲಂ 240 ಮತ್ತು 248 ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆಂದು ನನಗೆ ಮನದಟ್ಟಾಗಿರುತ್ತದೆ.

ಮಂಜೂರಾತಿ ನಕ್ಷೆಗೆ/ವಲಯ ನಿಯಮಾವಳಿಗಳಿಗೆ ಹೋಲಿಸಿದಂತೆ ಕಟ್ಟಡ ನಿರ್ಮಾಣದಲ್ಲಿ ಕೆಳಗಿನ ವ್ಯತ್ಯಾಸಗಳು/ಉಲ್ಲಂಘನೆಗಳು ಕಂಡುಬಂದಿರುತ್ತವೆ.

| | |
|---|---|
| ಎ) ಮಂಜೂರಾತಿ ನಕ್ಷೆ ಸಂಖ್ಯೆ:<br>ಬಿ) ಅನಧಿಕೃತ ಕಟ್ಟಡ | |
| ಸ್ವತ್ತಿನ/ನಿವೇಶನದ ವಿಸ್ತೀರ್ಣ (ಚ.ಮೀ ಗಳಲ್ಲಿ) | |

| ಕ್ರ.ಸಂ | ವಿವರಗಳು | ಮಂಜೂರಾತಿ ನಕ್ಷೆ/ ವಲಯ ನಿಯಮಾವಳಿಯಂತೆ | ಕಟ್ಟಡದ ವಾಸ್ತವಿಕ ಅಳತೆ | ಮಂಜೂರಾತಿ ನಕ್ಷೆ/ ವಲಯ ನಿಯಮಾವಳಿಗೆ ವ್ಯತಿರಿಕ್ತವಾಗಿರುವ ಪ್ರಮಾಣ | ಶೇಕಡಾವಾರು ವ್ಯತಿರಿಕ್ತ ಪ್ರಮಾಣ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ನಡುಜಾಗ (ಮೀ. ಗಳಲ್ಲಿ)<br>a) ಮುಂಭಾಗ<br>b) ಹಿಂಭಾಗ<br>c) ಎಡಭಾಗ<br>d) ಬಲಭಾಗ | | | | | |
| 2 | ಅನುಪಾತ (FAR) | | | | | |
| 3 | ಆವರಿಸುವಿಕೆ (Coverage) | | | | | |
| 4 | ಅಂತಸ್ತುಗಳ ಸಂಖ್ಯೆ | | | | | |
| 5 | ಕಟ್ಟಡ ಬಳಕೆ | | | | | |
| 6 | ಕಟ್ಟಡ ಎತ್ತರ (ಮೀ. ಗಳಲ್ಲಿ) | | | | | |

ಮೇಲ್ಕಂಡ ಕೋಷ್ಠಕದಲ್ಲಿ ನಮೂದಿಸಿರುವಂತೆ ಅನಧಿಕೃತ/ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣ ಮಾಡುತ್ತಿರುವ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ಈ ಕೂಡಲೇ ತೆರವುಗೊಳಿಸಲು ಮತ್ತು ಅಲ್ಲಿಯವರೆಗೆ ಕಟ್ಟಡದ ಯಾವುದೇ ಭಾಗದ ನಿರ್ಮಾಣ ಕಾರ್ಯವನ್ನು ಮುಂದುವರೆಸದಂತೆ ಬಿಬಿಎಂಪಿ ಕಾಯ್ದೆಯ ಕಲಂ 248 (1) (iii) ರಲ್ಲಿ ನಿರ್ದೇಶನ ನೀಡುವುದು ಅವಶ್ಯಕವಾಗಿರುತ್ತದೆ.

ಈ ಅಂಶಗಳ ಹಿನ್ನೆಲೆಯಲ್ಲಿ ಬಿಬಿಎಂಪಿ ಕಾಯ್ದೆ–2020ರ ಕಲಂ 248 ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಆದೇಶ ಹೊರಡಿಸುತ್ತಿದ್ದೇನೆ.

**ತಾತ್ಕಾಲಿಕ ಆದೇಶ**

**ಸಂಖ್ಯೆ:ಬಿಬಿಎಂಪಿ/ /** **ದಿನಾಂಕ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ____________ ವಲಯದ, ವಲಯ ಆಯುಕ್ತರಾದ ನಾನು ಬಿಬಿಎಂಪಿ ಕಾಯ್ದೆ 2020ರ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮೇಲ್ಕಂಡ ಕಟ್ಟಡದ ಮಾಲೀಕರಾದ/ನಿರ್ಮಾಣದಾರರಾದ ಶ್ರೀ/ಶ್ರೀಮತಿ/ಮೆ॥ ________________ ಇವರು ಮೇಲ್ಕಂಡ ಕೋಷ್ಠಕದಲ್ಲಿ ವಿವರಿಸಿದಂತೆ ಅನಧಿಕೃತವಾಗಿ/ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣ ಮಾಡಿರುವ ಕಟ್ಟಡದ ಭಾಗಗಳನ್ನು ತಕ್ಷಣವೇ ತೆರವುಗೊಳಿಸುವಂತೆ ಮತ್ತು ಅಲ್ಲಿಯವರೆಗೆ ಸಂಪೂರ್ಣ ಕಟ್ಟಡ ನಿರ್ಮಾಣದ ಯಾವುದೇ ಕಾಮಗಾರಿಯನ್ನು ಮುಂದುವರೆಸದಂತೆ ಈ ಮೂಲಕ ಆದೇಶ ನೀಡಿರುತ್ತೇನೆ.

ವಲಯ ಆಯುಕ್ತರು
__________ ವಲಯ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ಆಯುಕ್ತರು ರವರ ಕಛೇರಿ,__________ ವಲಯ, ಬಿಬಿಎಂಪಿ, ಬೆಂಗಳೂರು

**ಸಂಖ್ಯೆ:** **ದಿನಾಂಕ:**

**ಬಿಬಿಎಂಪಿ ಕಾಯ್ದೆ 2020 ರ ಕಲಂ 248 (2) ರ ಪ್ರಕಾರ ಹೊರಡಿಸಿರುವ ಕಾರಣ ಕೇಳುವ ನೋಟೀಸ್**

**ವಿಷಯ:** ಅನಧಿಕೃತವಾಗಿ/ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವ ಬಗ್ಗೆ

**ಉಲ್ಲೇಖ:** ಈ ಕಚೇರಿಯಿಂದ ಬಿಬಿಎಂಪಿ ಕಾಯ್ದೆಯ ಕಲಂ 248(1) ರಡಿಯಲ್ಲಿ ಹೊರಡಿಸಿರುವ ತಾತ್ಕಾಲಿಕ ಆದೇಶ ಸಂಖ್ಯೆ:__________ ದಿನಾಂಕ: __________

* * * * *

ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖದಲ್ಲಿ ಈ ಕಛೇರಿಯಿಂದ ತಾತ್ಕಾಲಿಕ ಆದೇಶ ಸಂಖ್ಯೆ: __________ ದಿನಾಂಕ:__________ ಅನ್ನು ಹೊರಡಿಸಲಾಗಿದೆ. ಹಾಗೂ ಸದರಿ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಈ ಆದೇಶಕ್ಕನುಗುಣವಾಗಿ ನೀವು ಅನಧಿಕೃತವಾಗಿ/ಮಂಜೂರಾತಿ ನಕ್ಷೆ ಉಲ್ಲಂಘಿಸಿ ನಿರ್ಮಿಸಿದ ಕಟ್ಟಡದ ಅಂತಸ್ತುಗಳು/ ಭಾಗಗಳನ್ನು ತೆರವುಗೊಳಿಸಿ, ಮಂಜೂರಾತಿ ನಕ್ಷೆಯಂತೆ ಸರಿಪಡಿಸಿ ವರದಿ ಮಾಡುವ ತನಕ ಮಂಜೂರಾತಿ ನಕ್ಷೆಯ ಹಾಗೂ ಕಟ್ಟಡ ಉಪವಿಧಿಗೆ ವಿರುದ್ಧವಾಗಿ ನಿರ್ಮಿಸುತ್ತಿರುವ ಕಟ್ಟಡದ ಯಾವುದೇ ಕಾಮಗಾರಿಯನ್ನು ಈ ಆದೇಶ ಜಾರಿಯಾದ ತಕ್ಷಣವೇ ಮುಂದುವರೆಸದಂತೆ ಸ್ಥಗಿತಗೊಳಿಸಬೇಕೆಂದು ಬಿಬಿಎಂಪಿ ಕಾಯ್ದೆ, 2020 ರ ಕಲಂ 248(1) ರ ಪ್ರಕಾರ ಆದೇಶ ನೀಡಿ ಕಾಯ್ದೆಯ ಕಲಂ 248(2) ರಡಿಯಲ್ಲಿ ಈ ನೋಟೀಸ್ ನೀಡಲಾಗುತ್ತಿದೆ.

ಉಲ್ಲೇಖಿತ ತಾತ್ಕಾಲಿಕ ಆದೇಶದಂತೆ ಅನಧಿಕೃತವಾಗಿ/ಮಂಜೂರಾತಿ ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣ ಮಾಡಿರುವ ಕಟ್ಟಡದ ಅಂತಸ್ತುಗಳು/ಭಾಗಗಳನ್ನು ಈ ಆದೇಶದ ದಿನಾಂಕದಿಂದ 15 ದಿನಗಳೊಳಗಾಗಿ ತೆರವುಗೊಳಿಸಿ ಮಾಹಿತಿ ನೀಡಲು ಅಥವಾ ಸೂಕ್ತ ಸಮುಜಾಯಿಷಿ ನೀಡಲು ಸೂಚಿಸಿದೆ.

ಒಂದು ವೇಳೆ ಮೇಲ್ಕಂಡ ತಾತ್ಕಾಲಿಕ ಆದೇಶ ತಲುಪಿದ 15 ದಿನಗಳೊಳಗಾಗಿ ಸದರಿ ಆದೇಶವನ್ನು ಪಾಲಿಸಲು ವಿಫಲರಾದಲ್ಲಿ ಅಥವಾ ದಾಖಲೆಗಳೊಂದಿಗೆ ಸೂಕ್ತ ಸಮಜಾಯಿಷಿ ನೀಡದಿರುವ ಪಕ್ಷದಲ್ಲಿ ಸದರಿ ತಾತ್ಕಾಲಿಕ ಆದೇಶವನ್ನು ಬಿಬಿಎಂಪಿ ಕಾಯ್ದೆ ಕಲಂ 248(3) ರಡಿಯಲ್ಲಿ ಸ್ಥಿರೀಕರಣಗೊಳಿಸಿ ಆದೇಶಿಸಲಾಗುವುದು. ಸದರಿ ಆದೇಶವನ್ನು ಜಾರಿಗೊಳಿಸಲು ಈ ಅಧಿನಿಯಮದ ಕಲಂ 356 ರಂತೆ ಹಾಗೂ ಇತರೆ ಸೂಕ್ತ ಕಾನೂನಿನ ಅವಕಾಶಗಳಂತೆ ನಿಮ್ಮ ವಿರುದ್ಧ ಕ್ರಮಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ. ಈ ಬಗ್ಗೆ ಕೈಗೊಳ್ಳಲಾಗುವ ಯಾವುದೇ ಜಾರಿ ಕ್ರಮಗಳ ಖರ್ಚು ವೆಚ್ಚಗಳನ್ನು ಭರಿಸಲು ನೀವೇ ಜವಾಬ್ದಾರರಾಗಿರುತ್ತೀರೆಂದು ಹಾಗೂ ನಿಮ್ಮಿಂದ ಸದರಿ ಖರ್ಚನ್ನು ವಸೂಲಿ ಮಾಡಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ವಲಯ ಆಯುಕ್ತರು

__________ ವಲಯ

ಇವರಿಗೆ:-

1. ಸ್ವತ್ತಿನ ಮಾಲೀಕರ/ನಿರ್ಮಾಣದಾರರ ಹೆಸರು ಮತ್ತು ವಿಳಾಸ

____________________

____________________

ಪ್ರತಿಯನ್ನು:-

1) ಕಿರಿಯ ಅಭಿಯಂತರರು/ಸಹಾಯಕ ಅಭಿಯಂತರರು & ಸಹಾಯಕ ಕಾರ್ಯಪಾಲಕ ಅಭಿಯಂತರರು ______________ ಉಪ ವಿಭಾಗ ರವರಿಗೆ ಕಳುಹಿಸುತ್ತಾ, ಈ ಆದೇಶದಂತೆ ಅನಧಿಕೃತ ಕಟ್ಟಡ/ ಕಟ್ಟಡದ ಹೆಚ್ಚುವರಿ ಅಂತಸ್ತುಗಳು/ಕಟ್ಟಡ ನಿರ್ಮಾಣವು ಮುಂದುವರೆಯದಂತೆ ತಡೆಯಲು ಕಾಲಕಾಲಕ್ಕೆ ಪರಿಶೀಲಿಸಿಕೊಂಡು ಕ್ರಮ ಜರುಗಿಸಲು ಆದೇಶಿಸಿದೆ.
2) ಸಹಾಯಕ ನಿರ್ದೇಶಕರು, ನಗರ ಯೋಜನೆ, ವಲಯ ಕಚೇರಿ ಇವರಿಗೆ ಕಳುಹಿಸುತ್ತಾ, ಅನ್‌ಲೈನ್ ಮಂಜೂರಾತಿ ನಕ್ಷೆ ಕಡತದಲ್ಲಿ ಸದರಿ ಆದೇಶವನ್ನು ಪ್ರಚುರಪಡಿಸಲು ಕ್ರಮ ಕೈಗೊಂಡು ವರದಿ ಮಾಡಲು ಸೂಚಿಸಿದೆ.
3) ಕಚೇರಿ ಪ್ರತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ಆಯುಕ್ತರು ರವರ ಕಛೇರಿ,________ ವಲಯ, ಬಿಬಿಎಂಪಿ, ಬೆಂಗಳೂರು

**ಬಿಬಿಎಂಪಿ ಕಾಯ್ದೆ 2020 ರ ಕಲಂ 248 (3) ಮತ್ತು ಕಲಂ 356(1)ರಡಿಯಲ್ಲಿ ಸ್ಥಿರೀಕರಣ ಆದೇಶ**

ವಿಷಯ: ಅನಧಿಕೃತವಾಗಿ/ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವ ಬಗ್ಗೆ

ಉಲ್ಲೇಖ:1) ಈ ಕಚೇರಿಯಿಂದ ಬಿಬಿಎಂಪಿ ಕಾಯ್ದೆಯ ಕಲಂ 248(1) ರಡಿಯಲ್ಲಿ ಹೊರಡಿಸಿರುವ ತಾತ್ಕಾಲಿಕ ಆದೇಶ ಸಂಖ್ಯೆ: ____________________ ದಿನಾಂಕ:____________

2) ಈ ಕಚೇರಿಯಿಂದ ಬಿಬಿಎಂಪಿ ಕಾಯ್ದೆಯ ಕಲಂ 248(2) ರಡಿಯಲ್ಲಿ ನೀಡಲಾಗಿರುವ ನೋಟಿಸ್ ಸಂಖ್ಯೆ: ________________________ ದಿನಾಂಕ:____________

3) ಶ್ರೀ/ಶ್ರೀಮತಿ/ಮೆ॥__________ಇವರು ಸಲ್ಲಿಸಿರುವ ಸಮುಜಾಯಿಷಿ ಪತ್ರ ದಿನಾಂಕ: ____________

* * * * *

ಶ್ರೀ/ಶ್ರೀಮತಿ/ಮೆ॥ ________________ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ________ ವಲಯದ ವಾರ್ಡ್ ಸಂಖ್ಯೆ:__________, ಸ್ವತ್ತಿನ ಸಂಖ್ಯೆ: __________, ರಲ್ಲಿ (ಷೆಡ್ಯೂಲ್ ಆಸ್ತಿಯಲ್ಲಿ) ಅನಧಿಕೃತವಾಗಿ/ಮಂಜೂರಾತಿ ನಕ್ಷೆ ಉಲ್ಲಂಘನೆ ಮಾಡಿ ಕಟ್ಟಡ ಕಟ್ಟುತ್ತಿರುವ/ಕಟ್ಟಿರುವ ಬಗ್ಗೆ ಉಲ್ಲೇಖ (1) ರಲ್ಲಿ ಬಿಬಿಎಂಪಿ ಕಾಯ್ದೆ 248(1) ರಡಿಯಲ್ಲಿ ತಾತ್ಕಾಲಿಕ ಆದೇಶ ಹೊರಡಿಸಿದ್ದು, ಉಲ್ಲೇಖ (2) ರ ನೋಟಿಸ್‌ನೊಂದಿಗೆ ಸದರಿ ಆದೇಶವನ್ನು ಜಾರಿಗೊಳಿಸಿ, ಕಟ್ಟಡ ತೆರವುಗೊಳಿಸಲು ಅಥವಾ ಸೂಕ್ತ ಸಮುಜಾಯಿಷಿ ನೀಡಲು ಸೂಚಿಸಲಾಗಿತ್ತು. ಅದರಂತೆ, ಉಲ್ಲೇಖ (3) ರಲ್ಲಿ ಸಮಜಾಯಿಷಿ ಸಲ್ಲಿಸಲಾಗಿದೆ/ಸಮಜಾಯಿಷಿ ಸಲ್ಲಿಸಿರುವುದಿಲ್ಲ. ಸಲ್ಲಿಸಿರುವ ಸಮಜಾಯಿಷಿಯನ್ನು ತಾತ್ಕಾಲಿಕ ಆದೇಶದೊಂದಿಗೆ ಕೂಲಂಕುಷವಾಗಿ ನಿಯಮಾನುಸಾರ ಪರಿಶೀಲಿಸಲಾಗಿ, ಈ ಕೆಳಕಂಡ ಕಾರಣಗಳಿಂದ ಕಟ್ಟಡ ಮಾಲೀಕರು/ನಿರ್ಮಾಣದಾರರು ಸಲ್ಲಿಸಿರುವ ಸಮಜಾಯಿಷಿಯು ತೃಪ್ತಿಕರವಾಗಿರುವುದಿಲ್ಲ.

(i) ______________________________________________

(ii) ______________________________________________

*(ಸಮಜಾಯಿಷಿಯು ತೃಪ್ತಿಕರವಾಗಿಲ್ಲದಿರುವ ಸಂದರ್ಭಗಳಲ್ಲಿ ಸಕಾರಣಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು)*

ಆದ್ದರಿಂದ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ಅನಧಿಕೃತವಾಗಿ/ನಕ್ಷೆ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡಿರುವುದು ಸಂಪೂರ್ಣವಾಗಿ ದೃಢಪಟ್ಟಿದೆ.

| | |
|---|---|
| ಎ) ಮಂಜೂರಾತಿ ನಕ್ಷೆ ಸಂಖ್ಯೆ:<br>ಬಿ) ಅನಧಿಕೃತ ಕಟ್ಟಡ: | |
| ಸ್ವತ್ತಿನ/ನಿವೇಶನದ ವಿಸ್ತೀರ್ಣ (ಚ.ಮೀ ಗಳಲ್ಲಿ) | |

| ಕ್ರಸಂ | ವಿವರಗಳು | ಮಂಜೂರಾತಿ ನಕ್ಷೆ/ ವಲಯ ನಿಯಮಾವಳಿಯಂತೆ | ಕಟ್ಟಡದ ವಾಸ್ತವಿಕ ಅಳತೆ | ಮಂಜೂರಾತಿ ನಕ್ಷೆ/ ವಲಯ ನಿಯಮಾವಳಿಗೆ ವ್ಯತಿರಿಕ್ತವಾಗಿರುವ ಪ್ರಮಾಣ | ಶೇಕಡಾವಾರು ವ್ಯತಿರಿಕ್ತ ಪ್ರಮಾಣ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ನಡುಜಾಗ (ಮೀ. ಗಳಲ್ಲಿ)<br>a) ಮುಂಭಾಗ<br>b) ಹಿಂಭಾಗ<br>c) ಎಡಭಾಗ<br>d) ಬಲಭಾಗ | | | | | |
| 2 | ಅನುಪಾತ (FAR) | | | | | |
| 3 | ಆವರಿಸುವಿಕೆ (Coverage) | | | | | |
| 4 | ಅಂತಸ್ತುಗಳ ಸಂಖ್ಯೆ | | | | | |
| 5 | ಕಟ್ಟಡ ಬಳಕೆ | | | | | |
| 6 | ಕಟ್ಟಡ ಎತ್ತರ (ಮೀ. ಗಳಲ್ಲಿ) | | | | | |

ಮೇಲ್ಕಂಡ ಉಲ್ಲಂಘನೆಗಳ ಹಿನ್ನಲೆಯಲ್ಲಿ ಈ ಕೆಳಗೆ ಸಹಿ ಮಾಡಿರುವ ನಾನು ಈ ಕೆಳಕಂಡಂತೆ ಸ್ಥಿರೀಕರಣ ಆದೇಶ ಹೊರಡಿಸುತ್ತಿದ್ದೇನೆ.

## ಆದೇಶ

ಸಂಖ್ಯೆ: ದಿನಾಂಕ:

ಮೇಲ್ಕಂಡ ಅಂಶ ಹಾಗೂ ವಿವರಗಳಿಂದ ಕಟ್ಟಡ ಮಾಲೀಕರಾದ/ನಿರ್ಮಾಣದಾರರಾದ ಶ್ರೀ/ಶ್ರೀಮತಿ/ಮೆ॥ ____________ ಸ್ವತ್ತಿನ ಸಂಖ್ಯೆ: ______________ ಬೆಂಗಳೂರು ಇಲ್ಲಿ ಬಿಬಿಎಂಪಿ ಕಾಯ್ದೆ 2020ರ ಕಲಂ 240 ಹಾಗೂ ವಲಯ ನಿಯಮಾವಳಿಗಳನ್ನು ಉಲ್ಲಂಘಿಸಿ ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ/ಅನಧಿಕೃತವಾಗಿ ನಿರ್ಮಾಣ ಮಾಡುತ್ತಿರುವ/ಮಾಡಿರುವ ಅನಧಿಕೃತ ಕಟ್ಟಡದ ಭಾಗ/ ಅಂತಸ್ತುಗಳನ್ನು ಬಿಬಿಎಂಪಿ ಕಾಯ್ದೆ 356(1) ರಂತೆ ಈ ಆದೇಶದ ದಿನಾಂಕದಿಂದ ಮೂವತ್ತು (30) ದಿನಗಳ ಕಾಲವಕಾಶ ನೀಡಿ, ತೆರವುಗೊಳಿಸುವಂತೆ ಬಿಬಿಎಂಪಿ ಕಾಯ್ದೆಯ ಕಲಂ 248(3) ರಡಿಯಲ್ಲಿ ಈ ಸ್ಥಿರೀಕರಣ ಆದೇಶವನ್ನು ಹೊರಡಿಸಿರುತ್ತೇನೆ.

ಸದರಿ ಅನಧಿಕೃತ/ಮಂಜೂರಾತಿ ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣ ಮಾಡಿರುವ ಕಟ್ಟಡದ ಅಂತಸ್ತುಗಳನ್ನು/ಕಟ್ಟಡದ ಭಾಗಗಳನ್ನು ತೆರವುಗೊಳಿಸುವವರೆಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 15(4)ರಂತೆ ಸದರಿ ಕಟ್ಟಡದ ಉಪಯೋಗವನ್ನು ತಡೆಯುವ ದೃಷ್ಟಿಯಿಂದ ಅನಧಿಕೃತವಾಗಿ ನಿರ್ಮಾಣವಾಗಿರುವ ಕಟ್ಟಡದ ಅಂತಸ್ತುಗಳನ್ನು ಸೀಲ್ ಮಾಡಿ ಪಾಲಿಕೆಯ ನಿಯಂತ್ರಣಕ್ಕೆ ಪಡೆಯಲಾಗುತ್ತಿದೆ.

ಒಂದು ವೇಳೆ ಈ ಆದೇಶದಂತೆ ಅನಧಿಕೃತ ಕಟ್ಟಡ/ಕಟ್ಟಡದ ಹೆಚ್ಚುವರಿ ಅಂತಸ್ತುಗಳು/ಕಟ್ಟಡದ ಉಲ್ಲಂಘಿತ ಭಾಗವನ್ನು ತೆರವುಗೊಳಿಸದೇ ಇದ್ದ ಪಕ್ಷದಲ್ಲಿ ಬಿಬಿಎಂಪಿ ಕಾಯ್ದೆ 2020ರ ಕಲಂ 356(2) ರಡಿಯಲ್ಲಿ ಅನಧಿಕೃತ ಕಟ್ಟಡ/ಕಟ್ಟಡದ ಹೆಚ್ಚುವರಿ ಅಂತಸ್ತುಗಳು/ಕಟ್ಟಡದ ಉಲ್ಲಂಘಿತ ಭಾಗವನ್ನು ಪಾಲಿಕೆಯಿಂದಲೇ ತೆರವುಗೊಳಿಸಿ, ಈ ಸಂಬಂಧ ತಗಲುವ ವೆಚ್ಚವನ್ನು ನಿಮ್ಮಿಂದ ವಸೂಲಿ ಮಾಡಲಾಗುವುದು.

ಈ ಆದೇಶವನ್ನು ಉಲ್ಲಂಘಿಸಿದಲ್ಲಿ ಅಥವಾ ಈ ಆದೇಶವನ್ನು ಜಾರಿಗೊಳಿಸಲು ಪಾಲಿಕೆಯ ಅಧಿಕಾರಿಗಳಿಗೆ ಅಡ್ಡಿಪಡಿಸಿದಲ್ಲಿ ಬಿಬಿಎಂಪಿ ಕಾಯ್ದೆ 2020ರ ಕಲಂ 326 ರಿಂದ 329ರ ಅಪರಾಧಗಳಿಗಾಗಿ ಅಭಿಯೋಜನೆಗೆ ಒಳಪಡಿಸಲು ಕಾನೂನು ಕ್ರಮ ಜರುಗಿಸಲಾಗುವುದು.

ವಲಯ ಆಯುಕ್ತರು
__________ ವಲಯ

ಇವರಿಗೆ:
ಸ್ವತ್ತಿನ ಮಾಲೀಕರ/ನಿರ್ಮಾಣದಾರರ ಹೆಸರು ಮತ್ತು ವಿಳಾಸ

____________________

____________________

ಯಥಾ ಪ್ರತಿಯನ್ನು:-

1) ಕಂದಾಯಾಧಿಕಾರಿಗಳು__________ ವಿಭಾಗ ರವರಿಗೆ ಕಳುಹಿಸುತ್ತಾ, ಈ ಆದೇಶದಂತೆ ಕಟ್ಟಡದ ಹೆಚ್ಚುವರಿ ಅಂತಸ್ತುಗಳನ್ನು ಈ ಕೂಡಲೇ ಸೀಲ್ ಮಾಡಿ ನಿಯಂತ್ರಣಕ್ಕೆ ಪಡೆದು ವರದಿ ಮಾಡಲು ಈ ಮೂಲಕ ಆದೇಶಿಸಿದೆ.
2) ಕಾರ್ಯಪಾಲಕ ಅಭಿಯಂತರರು __________ವಿಭಾಗ ರವರಿಗೆ ಕಳುಹಿಸುತ್ತಾ, ಈ ಆದೇಶದಂತೆ 30 ದಿನಗಳೊಳಗಾಗಿ ಅನಧಿಕೃತ ಕಟ್ಟಡ/ಕಟ್ಟಡದ ಹೆಚ್ಚುವರಿ ಅಂತಸ್ತುಗಳು/ಕಟ್ಟಡದ ಉಲ್ಲಂಘಿತ ಭಾಗವನ್ನು ಮಾಲೀಕರು/ನಿರ್ಮಾಣದಾರರು ತೆರವುಗೊಳಿಸದಿದ್ದಲ್ಲಿ, ಅನಧಿಕೃತ ಕಟ್ಟಡ/ ಕಟ್ಟಡದ ಹೆಚ್ಚುವರಿ ಅಂತಸ್ತುಗಳು/ಕಟ್ಟಡದ ಉಲ್ಲಂಘಿತ ಭಾಗವನ್ನು ತೆರವುಗೊಳಿಸಲು ಅಂದಾಜುಪಟ್ಟಿಯನ್ನು ಸಿದ್ದಪಡಿಸಿ ತೆರವುಗೊಳಿಸುವ ಕಾರ್ಯವನ್ನು ಗುತ್ತಿಗೆದಾರರಿಗೆ ವಹಿಸಿ ಕಾಯ್ದೆಯ ಕಲಂ 356(2) ರಡಿಯಲ್ಲಿ ತೆರವುಗೊಳಿಸಿ ಕ್ರಮ ಜರುಗಿಸಲು ಈ ಮೂಲಕ ಆದೇಶಿಸಿದೆ. ತೆರವುಗೊಳಿಸಲು ತಗಲು ವೆಚ್ಚವನ್ನು ಕಂದಾಯ ಶಾಖೆಗೆ ತಿಳಿಸಲು ಸೂಚಿಸಿದೆ.
3) ಜಂಟಿ ಆಯುಕ್ತರು ರವರಿಗೆ ಕಳುಹಿಸುತ್ತಾ ಅನಧಿಕೃತ ಕಟ್ಟಡ/ ಕಟ್ಟಡದ ಹೆಚ್ಚುವರಿ ಅಂತಸ್ತುಗಳು/ಕಟ್ಟಡದ ಉಲ್ಲಂಘಿತ ಭಾಗವನ್ನು ತೆರವುಗೊಳಿಸಲು ತಗಲುವ ವೆಚ್ಚವನ್ನು ಕಂದಾಯ ಬಾಕಿಯೆಂದು ವಸೂಲಿ ಮಾಡಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದೆ.
4) ಸಹಾಯಕ ನಿರ್ದೇಶಕರು, ನಗರ ಯೋಜನೆ, ವಲಯ ಕಚೇರಿ ಇವರಿಗೆ ಕಳುಹಿಸುತ್ತಾ, ಅನ್‌ಲೈನ್ ಮಂಜೂರಾತಿ ನಕ್ಷೆ ಕಡತದಲ್ಲಿ ಸದರಿ ಆದೇಶವನ್ನು ಪ್ರಚುರಪಡಿಸಲು ಕ್ರಮ ಕೈಗೊಂಡು ವರದಿ ಮಾಡಲು ಸೂಚಿಸಿದೆ.
5) ಕಿರಿಯ ಅಭಿಯಂತರರು/ಸಹಾಯಕ ಅಭಿಯಂತರರು & ಸಹಾಯಕ ಕಾರ್ಯಪಾಲಕ ಅಭಿಯಂತರರು __________ ಉಪ ವಿಭಾಗ ರವರಿಗೆ ಕಳುಹಿಸುತ್ತಾ, ಈ ಆದೇಶದಂತೆ ಅನಧಿಕೃತ ಕಟ್ಟಡ/ ಕಟ್ಟಡದ ಹೆಚ್ಚುವರಿ ಅಂತಸ್ತುಗಳು/ಕಟ್ಟಡ ನಿರ್ಮಾಣವು ಮುಂದುವರೆಯದಂತೆ ತಡೆಯಲು ಕಾಲಕಾಲಕ್ಕೆ ಪರಿಶೀಲಿಸಿಕೊಂಡು ಕ್ರಮ ಜರುಗಿಸಲು ಆದೇಶಿಸಿದೆ.
6) ಕಛೇರಿ ಪ್ರತಿ.